Land given to Sheep Rearing Associations in Chitaldrug and Mandya Districts.

Q.—107. Sri B. N. BORANNA GOWDA (Belur).—

Will the Government be pleased to state:—

(*a*) the number of sheep rearing Associations in the Districts of Chitaldrug and Mandya;

(*b*) the number of sheep maintained by these associations;

(*c*) the number of acres of land given to these associations;

(*d*) by whom these lands were granted and the year in which they were granted;

(*e*) whether these lands are being utilised for the purpose for which they were granted;

(*f*) if not, for what other purpose they are being utilised?

A.—Sri H. SIDDAVEERAPPA (Minister for Home and Industries).—

(*a*) There are two Sheep Breeders' Associations in Mandya District and one in Chitaldrug District.

There is also an "Aided Sheep Breeding Scheme" in Chitaldrug District operating in Rangaiahnadurga Kaval of Holalkere Taluk.

(*b*) The Sheep Breeders' Associations as such do not maintain any sheep. Only the members of these associations maintain sheep. The associations take care of sheep belonging to the members.

In Mandya District there are 535 members with 22,213 sheep.

In Chitaldrug District there are 266 members with 15,100 sheep.

Under Aided Sheep Breeders' Scheme there are 552 sheep, and there are three Breeders.

(*c*) The Sheep Breeders' Associations are not given lands. But they enjoy certain other facilities.

Under the Aided Sheep Breeders' Scheme at Rangaiahnadurga Kaval, an extent of 2,916 acres and 14 guntas of land has been given on lease in the year 1951.

(*d*) By the Government in their Order dated 22nd May 1951.

(*e*) The scheme is not working satisfactorily.

(*f*) Does not arise in view of reply to (*e*).

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ರಂಗಯ್ಯನ ದುರ್ಗ ಎಂಬ ಕಾವಲನ್ನು ಕೊಟ್ಟಿರುವುದು ಯಾವ ಉದ್ದೇಶಕ್ಕಾಗಿ?

*ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ದೇಶದಲ್ಲಿ ಒಳ್ಳೆಯ ಕುರಿಗಳ ತಳಿಗಳನ್ನು ಉತ್ಪತ್ತಿ ಮಾಡುವುದಕ್ಕೂ, ಉಣ್ಣೆ ಹೆಚ್ಚಾಗಿ ಬರತಕ್ಕಂಥ ಕುರಿಗಳನ್ನು ಇಲ್ಲಿಸಾಕುವಂತೆ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರದವರು ಒಂದು ಸ್ಕೀಮನ್ನು ಮಾಡಿ, ಅದನ್ನು ಕೊಟ್ಟಿದ್ದಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅದರಲ್ಲಿ ಮೆರಿನಾ ಕುರಿಗಳೂ ಇವೆಯೋ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಮತ್ತೆ ಯಾವ ಉದ್ದೇಶದಿಂದ ಅದನ್ನು ಕೊಡಲಾಯಿತು?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರಿ ಆರ್ಡರಿನಲ್ಲಿ ಹೇಳಿರುವ ಪ್ರಕಾರ ಉತ್ತಮವಾದ ಕುರಿತಳಿಗಳನ್ನು ಏರ್ಪಡಿಸಿ, ಅವುಗಳನ್ನು ಅಭಿವೃದ್ಧಿ ಪಡಿಸಬೇಕೆಂಬ ಉದ್ದೇಶದಿಂದ ಕೊಡಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಗೆ ತಳಿಗಳನ್ನು ಉತ್ತಮ ಪಡಿಸುವುದು ಮಾಂಸಕ್ಕಾಗಿಯೋ ಅಥವಾ ಉಣ್ಣೆಗಾಗಿಯೋ?

ಶ್ರೀ ಎಚ್. ಸಿದ್ದವೀರಪ್ಪ.—ಎರಡೂ ಉದ್ದೇಶಗಳಿಂದ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಗೆ ಒಳ್ಳೆಯ ಕುರಿಗಳನ್ನು ಸಾಕತಕ್ಕವರಿಗೆ ಒಬ್ಬೊಬ್ಬರಿಗೆ 40–50 ಕುರಿಗಳನ್ನು ಒದಗಿಸಿದರೆ ಅವು ಸಾಕಾಗುತ್ತವೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅಷ್ಟೇ ಸಾಲದು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಒಂದೊಂದು ಮಂದೆಯಲ್ಲಿಯೂ ಸಾವಿರಾರು ಕುರಿಗಳಿರುವುದು ತಮ್ಮ ಅವಗಾಹನೆಗೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಗೆ ಬಂದಿದ್ದರೆ ಅಷ್ಟು ಕುರಿಗಳನ್ನು ಸಾಕುವುದಕ್ಕೆ ಇಷ್ಟೊಂದು ದೊಡ್ಡ ಕಾವಲನ್ನು ಕೊಡುವುದಕ್ಕಾಗುತ್ತದೆಯೇ?

Sri H. SIDDAVEERAPPA.—It is a matter for examination.

ಶ್ರೀ ಬಿ. ಎಚ್. ಬೋರಣ್ಣಗೌಡ.—ತಾವೀಗ ಯಾವ ಒಂದು ಉದ್ದೇಶಕ್ಕಾಗಿ ಆ ರಂಗಯ್ಯನದುರ್ಗದ ಕಾವಲನ್ನು ಕೊಟ್ಟಿದ್ದೀರೋ ಆ ಉದ್ದೇಶ ಸಫಲವಾಗುತ್ತದೆಯೇ?

Sri H. SIDDAVEERAPPA.—I have received a report that the scheme is not working quite satisfactorily.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಗೆನ್ನುವಾಗ ತಾವು ಈಗ ಕೊಟ್ಟಿರತಕ್ಕ ಜಮೀನನ್ನು ಹಿಂದಕ್ಕೆ ವಾಪಸ್ಸು ಪಡೆಯಲು ಪ್ರಯತ್ನ ಮಾಡುತ್ತೀರಾ?

Sri H. SIDDAVEERAPPA.—I will examine it because in the agreement itself it is provided that if the scheme is not satisfactory, the Government may take back the land.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈಗ ಆ ಜಮೀನಿನಲ್ಲಿ ಅವರು ಬೆಳೆಗಳನ್ನಿಡುತ್ತಿದ್ದಾರೆಂಬ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿಯಾಗಿ ದೂರುಗಳು ಬಂದಿವೆ.

ಶ್ರೀ ಜಿ. ದುಗ್ಗಪ್ಪ.—ಅಲ್ಲಿ 1,500 ಕುರಿಗಳಿವೆಯೆಂದು ಹೇಳಿದ್ದೀರಿ. ಈ ಅಂಕೆ ಅಂಶಗಳನ್ನು ಸಂಗ್ರಹಿಸಿದ್ದು ಯಾವ ಕಾಲದಲ್ಲಿ?

Sri H. SIDDAVEERAPPA.—The Government of Mysore always keep the latest figures.

ಶ್ರೀ ಜಿ. ದುಗ್ಗಪ್ಪ.—ಲೇಟೆಸ್ಟ್ ಫಿಗರ್ಸ್ ಎಂದರೆ ಯಾವತ್ತಾರಿಖಿನಿಂದ ಇಡಲಾಗಿರುವುದು?

ಶ್ರೀ ಎಚ್. ಸಿದ್ದವೀರಪ್ಪ.—ಕ್ಯೂಕ್ಯೆನಿಯಲ್ ರಿಪೋರ್ಟ್‌ಗಳು ಇರುತ್ತವೆ. ಅದರ ಪ್ರಕಾರ ಇದು ಲೇಟೆಸ್ಟ್ ಫಿಗರ್. But I do not exactly remember the year. Anyway, that is the latest figure.

ಶ್ರೀ ಜಿ. ದುಗ್ಗಪ್ಪ.—ಈಗ ಹಾಲಿ ಅಲ್ಲಿ ಕುರಿಗಳಿವೆಯೆಂದು ತಮಗೆ ತಿಳಿದು ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ತಿಳಿದು ಬಂದಿದೆ.

ಶ್ರೀ ಜಿ. ದುಗ್ಗಪ್ಪ.—ಹಾಗಿದ್ದರೆ ಎಷ್ಟು?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ಬಂದಿರತಕ್ಕ ಅಂಕೆ ಅಂಶಗಳ ಪ್ರಕಾರ 600 ವರೆಗೆ ಇವೆಯೆಂದು ತಿಳಿದು ಬಂದಿದೆ. ಅದರಲ್ಲಿ ಕೆಲವು ಕುರಿಗಳು ಅಲ್ಲಿ ಹೋದ ವರ್ಷ ಮಳೆ ಬಾರದೆ ಹೋದುದರಿಂದ ಅವುಗಳಿಗೆ ಮೇವು ಇಲ್ಲದ ಕಾರಣ, ತರೀಕೆರೆ ಜಂಗಲಿಗೆ ಮೇಯುವುದಕ್ಕೆ ಹೋಗಿವೆಯೆಂದು ತಿಳಿದು ಬಂದಿವೆ.

ಶ್ರೀ ಜಿ. ದುಗ್ಗಪ್ಪ.—ಹಾಗೆ ಆ ಜಮೀನುಗಳನ್ನು ಕೊಟ್ಟಿರುವುದು ಕುರಿಗಳನ್ನು ಮೇಯಿಸುವುದಕ್ಕೋ ಅಥವಾ ಮತ್ತೆ ಯಾವ ಕಾರಣಗಳಿಗಾಗಿಯೋ?

Mr. SPEAKER.—That has been answered.

ಶ್ರೀ ಜಿ. ದುಗ್ಗಪ್ಪ.—ಅಲ್ಲಿ ಈಗ ಆ ಜಮೀನುಗಳನ್ನು ಸಾಗುವಳಿ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—I have already answered that there are complaints.

ಶ್ರೀ ಜಿ. ದುಗ್ಗಪ್ಪ.—ಡೆಫೆನೆಟ್ಟಾಗಿ ಅಲ್ಲಿ 201 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ಎಂಬುದು ನನ್ನ ಪ್ರಶ್ನೆ.

Sri H. SIDDAVEERAPPA.—I am getting that question examined whether the terms of the agreement have been complied with or not; if not, the Government will take such action as is necessary under the agreement.

ಶ್ರೀ ಜಿ. ದುಗ್ಗಪ್ಪ.—ಹಾಗಿದ್ದಮೇಲೆ ಏನು ಆಕ್ಷನ್ ತೆಗೆದುಕೊಂಡಿದ್ದೀರಿ?

Mr. SPEAKER.—When there was already a supplementary question by Sri Boranna Gowda, it was answered that there are such complaints. What more information the Hon'ble Member wants, I cannot understand.

ಶ್ರೀ ಎಸ್. ಎಂ. ಮರಿಯಪ್ಪ.—ಈ ಬ್ರೀಡಿಂಗ್ ಸ್ಕೀಮಿನಲ್ಲಿ ಉನ್ನತ ಶಿಕ್ಷಣ ಪಡೆಯುವುದಕ್ಕಾಗಿ ತಾವು ಯಾರನ್ನಾದರೂ ಪರದೇಶಕ್ಕೆ ಕಳುಹಿಸಿಕೊಟ್ಟಿದ್ದಿರಾ?

Sri H. SIDDAVEERAPPA.—Yes, I remember Sri Muniyappa was sent.

ಶ್ರೀ ಎಸ್. ಎಂ. ಮರಿಯಪ್ಪ.—ಈಗ ಅವರು ಎಲ್ಲಿ ಕೆಲಸಮಾಡುತ್ತಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ವೆಟರಿನೆರಿ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ನಮ್ಮ ಅನಿಮಲ್ ಹಸ್ಬೆಂಡ್ರಿ ಇಲಾಖೆಯಲ್ಲಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹಾದು.

ಶ್ರೀ ಎಸ್. ಎಂ. ವರಿಯಪ್ಪ.—ಮೈಸೂರು ಸರ್ಕಾರದಲ್ಲೇ ಕೆಲಸಮಾಡುತ್ತಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹಾದು. ಮೈಸೂರು ಸರ್ಕಾರದಲ್ಲೇ ಕೆಲಸಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಅವರು ಹಾಗೆ ಶೀಮೆಗೆ ಹೋಗಿ ಬಂದಮೇಲೆ ಆ ಸ್ಕೀಮು ಫಲಕಾರಿಯಾಗಿದೆಯೇ?

Sri H. SIDDAVEERAPPA.—I cannot say. It is a very difficult question for me to answer.

ಶ್ರೀ ಎಸ್. ಎಂ. ಮರಿಯಪ್ಪ.—ಮೈಸೂರು ದೇಶದ ಎಲ್ಲ ಕಡೆಗಳಲ್ಲಿಯೂ ಈ ಸ್ಕೀಮಿನ ಪ್ರಸಾರ ಹರಡಲು ಪ್ರಯತ್ನಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಆಲೋಚನೆ ಮಾಡೋಣ.

Meetings of the State Transport Authority.

Q.—109. Sri B. P. NAGARAJA MURTHY (Malavalli).—

Will the Government be pleased to state:—

(*a*) how many times the State Transport Authority has met since it was constituted up to the end of May 1953;

(*b*) how many cases it has disposed of during the above period and how many cases are pending;

(*c*) how many appeals are preferred to the Government from the